**ಸಾಕ್ಷಿಯನ್ನು ದಿಃ 29.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಎಂ.ಪಿ.ಆರ್., ವಕೀಲರಿಂದಃ**

1 ನೇ ವಾದಿಗೆ 90 ವರ್ಷ ವಯಸ್ಸು ಆಗಿದೆ. ಸ.ನಂ.54 ದೊಡ್ಡರೂಕರಪನಹಳ್ಳಿಯಲ್ಲಿರುವ ಜಮೀನು ಮೂಲತಃ ಗೋಮಾಳ ಜಮೀನು ಎಂದರೆ ಸರಿ. ಸ.ನಂ.54 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ ಮತ್ತು ಎಷ್ಟು ಜನರಿಗೆ ಮಂಜೂರು ಆಗಿದೆ ಎಂದು ನನಗೆ ಗೊತ್ತಿಲ್ಲ. ಸ.ನಂ.54 ಮಂಜೂರು ಆಗಿ ಎಷ್ಟು ಜಮೀನು ಉಳಿತಾಯ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸ.ನಂ.54 ರಲ್ಲಿ ಭೂ ಮಂಜೂರು ಆಗುವ ಮುನ್ನ ಸರ್ವೆ ಮಾಡಲಾಗಿತ್ತು ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ತಂದೆ ಬದುಕಿದ್ದ ಕಾಲದಲ್ಲಿ ಮಂ ಜೂರಾದ ಜಮೀನನ್ನು ಅಳತೆ ಮಾಡಿ ಹದ್ದುಬಸ್ತು ಮಾಡಲು ಅರ್ಜಿಯನ್ನು ಸಲ್ಲಿಸಿದರು. ಅರ್ಜಿಯನ್ನು ಸಹ ಇನ್ನೂ ಕ್ರಮ ಕೈಗೊಂಡಿಲ್ಲ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅರ್ಜಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ನಂತರ ನನ್ನ ತಾಯಿ ಹೆಸರಿಗೆ ಕಂದಾಯ ದಾಖಲೆಗಳು ವರ್ಗಾವಣೆಯಾದ ಬಳಿಕ ನನ್ನ ತಾಯಿಯಾಗಲೀ ಮತ್ತು ನಾನಾಗಲೀ ಅರ್ಜಿಯನ್ನು ಸಲ್ಲಿಸಿರಬಹುದು. ನಾನು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೂ ಇಲ್ಲವೂ ನನಗೆ ನೆನಪಿಲ್ಲ. ನನ್ನ ತಂದೆಗೆ ಸ.ನಂ.54 ರಲ್ಲಿ 1 ಎಕರೆ 5 ಗುಂಟೆ ಜಮೀನು ಮಂಜೂರು ಆಗಿದೆ ಮತ್ತು ಅದರ ಅಸ್ತಿತ್ವ ಮತ್ತು ಚೆಕ್ಕುಬಂದಿಯನ್ನು ನಿಖರವಾಗಿ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸ.ನಂ.54 ಪಿ7 ರಲ್ಲಿ 1 ಎಕರೆ 5 ಗುಂಟೆ ವಿಸ್ತೀರ್ಣದಲ್ಲಿ ಮತ್ತು ನಾನು ತೋರಿಸಿದ ಚೆಕ್ಕುಬಂದಿಯಲ್ಲಿ ಇದ್ದೇನೆಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿ ನನ್ನ ಆಸ್ತಿಯ ಅಸ್ಥಿತ್ವವನ್ನು ಮತ್ತು ಚೆಕ್ಕುಬಂದಿಯ ವಿಸ್ತೀರ್ಣವನ್ನು ಗುರುತಿಸಲು ನನಗೆ ತೊಂದರೆ ಇಲ್ಲ. ನಾನು ದಾವಾ ಸ್ವತ್ತಿನ ಚೆಕ್ಕುಬಂದಿ ಮತ್ತು ವಿಸ್ತೀರ್ಣದಲ್ಲಿ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಗೆ ಮಂಜೂರಾದ ಬಳಿಕ ಯಾವುದೇ ದುರಸ್ತಿ ಮತ್ತು ಹದ್ದುಬಸ್ತು ಆಗದ ಕಾರಣ ನಾನು ನಿಖರವಾಗಿ 1 ಎಕರೆ 5 ಗುಂಟೆ ವಿಸ್ತೀರ್ಣದಲ್ಲಿ ಇದ್ದೇನೆಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಗ್ರಾಮದವರು ಎಂದರೆ ಸರಿ. ಪ್ರತಿವಾದಿಗಳು ಸ.ನಂ.54 ರಲ್ಲಿ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಅಕ್ಕ ಪಕ್ಕದಲ್ಲಿ ಪ್ರತಿವಾರದಿಗಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜಮೀನಿನ ಅಕ್ಕ ಪಕ್ಕದಲ್ಲಿ ಇರುವುದಿಲ್ಲ ಎಂದ ಕಾರಣದಿಂದ ಅವರು ನನ್ನ ಜಮೀನಿಗೆ ತಕರಾರು ಮಾಡುವ ಸಂಭವ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಹೇಳಿರುವ ದಾವಾ ಸ್ವತ್ತಿನ ಚೆಕ್ಕುಬಂದಿ ತಿಳಿದುಕೊಂಡಿದ್ದೇನೆ. ನಾನು ಕನ್ನಡ ಭಾಷೆಯನ್ನು ಓದುತ್ತೇನೆ. ಸಾಕ್ಷಿಗೆ ನಿಪಿ.1 ನ್ನು ತೋರಿಸಲಾಗಿ ಅದರ ಉತ್ತರ ಮತ್ತು ದಕ್ಷಿಣಕ್ಕೆ ಇದೇ ಸ.ನಂಬರ್ ನ ಜಮೀನು ಎಂದು ತೋರಿಸಲಾಗಿದೆ ಎಂದರೆ ಸರಿ. ಆದರೆ ನಾನು ವಾದ ಪತ್ರದಲ್ಲಿ ಉತ್ತರಕ್ಕೆ ಮುನಿಯಮ್ಮನ ಸ್ವತ್ತು ಮತ್ತು ದಕ್ಷಿಣಕ್ಕೆ ಬ್ಯಾಟರಾಯನ ಬೆಟ್ಟ ಎಂದು ತೋರಿಸಿದ್ದೇನೆ ಎಂದರೆ ಸರಿ. ನಿಪಿ.1 ರ ಪ್ರಕಾರ ಸ.ನಂ.54 ರ ಉತ್ತರ ಮತ್ತು ದಕ್ಷಿಣದ ಕಡೆ ಖಾಲಿ ಜಾಗ ಇದೆ ಎಂದರೆ ಸರಿ. ನನ್ನ ತಂದೆಗೆ ಮಂಜೂರಾದಂತೆ ಈಗಲೂ ನಾವು ಅದೇ ಚೆಕ್ಕುಬಂದಿಯಲ್ಲಿ ಸ್ವಾಧೀನದಲ್ಲಿ ಇದ್ದರೆ ದಕ್ಷಿಣದ ಕಡೆ ನಾನು ತೋರಿಸಿರುವ ಬ್ಯಾಟರಾಯನ ಬೆಟ್ಟ ಬರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನಿಪಿ.1 ರಲ್ಲಿ ದಕ್ಷಿಣದ ಕಡೆ ಇರುವ ನಮೂದು ತಪ್ಪಾಗಿದ್ದರೆ ಅದನ್ನು ಪ್ರಶ್ನಿಸಿ ಎಲ್ಲಿಯೂ ದಾವೆಯನ್ನು ಮತ್ತು ಅರ್ಜಿಯನ್ನು ಸಲ್ಲಿಸಿಲ್ಲ. ನಿಪಿ.1 ರಲ್ಲಿ ತೋರಿಸಿರುವ ಸ.ನಂ.54 ರ ಉತ್ತರ ದಕ್ಷಿಣದ ಕಡೆ ಬರುವ ಉಳಿಕೆ ಜಾಗದಲ್ಲಿ ಪ್ರತಿವಾದಿಗಳು ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಚೆಕ್ಕುಬಂದಿಯ ಪೂರ್ವದ ಕಡೆ ಉಳುಮೆ ಮಾಡಲು ಪ್ರಯತ್ನ ಮಾಡಿದ್ದಾರೆ. ನನ್ನ ವಾದಪತ್ರದ ಚೆಕ್ಕುಬಂದಿಯ ಪ್ರಕಾರ ಪೂರ್ವಕ್ಕೆ ರಾಮಪ್ಪನ ಜಮೀನು ಎಂದರೆ ಸರಿ,

ಪ್ರತಿವಾದಿಗಳು ಇರುವುದಿಲ್ಲ ಎಂದರೆ ಸರಿ , ನನ್ನ ಮತ್ತು ರಾಮಪ್ಪನ ಜಮೀನಿನ ನಡುವೆ ಯಾವುದೇ ಗೋಮಾಳ ಜಮೀನು ಉಳಿದಿರುವುದಿಲ್ಲ ಎಂದರೆ ಸರಿ . ರಾಮಪ್ಪನ ಜಮೀನನ್ನು ಪ್ರತಿವಾದಿಗಳು ಬೋಗಕ್ಕೆ ತೆಗೆದುಕೊಂಡು ಉಳುಮೆ ಮಾಡುತ್ತಿಲ್ಲ. ಆದ ಕಾರಣ ಪ್ರತಿವಾದಿಗಳು ಪೂರ್ವದ ಕಡೆಯಿಂದ ತೊಂದರೆ ಕೊಡುವ ಸಂಭವ ಬರುವುದಿಲ್ಲ ಎಂದರೆ ಸರಿ. ಉತ್ತರ – ದಕ್ಷಿಣದ ಕಡೆ ಪ್ರತಿವಾದಿಗಳು ಬರುವ ಕಾರಣದಿಂದ ಅವರ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಚೆಕ್ಕುಬಂದಿ ತೋರಿಸಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ. ನಾನು ತಪ್ಪಾಗಿ ಪ್ರತಿವಾದಿಗಳ ಆಸ್ತಿಯಲ್ಲಿ ಹಕ್ಕು ಕೇಳುತ್ತಿರುವುದರಿಂದ ಪ್ರತಿವಾದಿಗಳು ನನ್ನ ವಿರುದ್ಧ ತಹಶೀಲ್ದಾರ್, ಎ.ಸಿ , ಡಿ.ಸಿ ಮತ್ತು ಲೋಕಾಯುಕ್ತ ಮತ್ತು ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ಈ ಸಂಬಂಧ ನನ್ನ ಅಣ್ಣನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಇದೇ ವೈಷಮ್ಯದಿಂದ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**